KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar, Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/SSL-394A/2022-23/492 Date: 09 SEP 2022

## ಸುತ್ತೋಲೆ

ವಿಷಯ: "Financial Education and Investment Awareness" ವಿಷಯವನ್ನು ಕಲಿಸಲು ಮಹಾವಿದ್ಯಾಲಯಗಳಿಂದ ಸಂಯೋಜಕರ ನೇಮಕಾತಿ ಕುರಿತು.

ಉಲ್ಲೇಖ:1. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರ ಮಿಂಚಂಚೆ ದಿನಾಂಕ: 25.08.2022.
2. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 08-09-2022

------

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ತಿಳಿಯಪಡಿಸುವುದೇನೆಂದರೆ, ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅಡಿಯಲ್ಲಿ ಜಾರಿಯಲ್ಲಿರುವ ಎಲ್ಲ ಸ್ನಾತಕ ಪದವಿಗಳ 3 ಅಥವಾ 4ನೇ ಸೆಮಿಸ್ಟರ್‌ನಲ್ಲಿ ಪ್ರತಿ ವಿದ್ಯಾರ್ಥಿಯು ಕಡ್ಡಾಯವಾಗಿ "Financial Education and Investment Awareness" ವಿಷಯವನ್ನು ಭೌತಿಕವಾಗಿ ಕಲಿಯಬೇಕಾಗಿರುವುದರಿಂದ ತಮ್ಮ ಮಹಾವಿದ್ಯಾಲಯದಲ್ಲಿ ವಾಣಿಜ್ಯಶಾಸ್ತ್ರ, ನಿರ್ವಹಣಾಶಾಸ್ತ್ರ (Management), ಅರ್ಥಶಾಸ್ತ್ರ ಅಥವಾ ಗಣಿತ / ಸಂಖ್ಯಾಶಾಸ್ತ್ರ ವಿಷಯಗಳನ್ನು ಬೋಧಿಸುತ್ತಿರುವ ಒಂದು ಅಥವಾ ಎರಡು ಬೋಧಕ ಸಿಬ್ಬಂದಿಯವರನ್ನು ಸಂಯೋಜಕರೆಂದು ನೇಮಕ ಮಾಡುವ ಅವಶ್ಯಕತೆ ಇರುತ್ತದೆ. ಸದರಿ ಸಂಯೋಜಕರಿಗೆ ಎರಡು ದಿನಗಳ ತರಬೇತಿ ಕಾರ್ಯಾಗಾರವನ್ನು ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, **ರಾಷ್ಟ್ರೀಯ ಶೇರು ವಿನಿಮಯ ಅಕಾಡೆಮಿ** ಮತ್ತು ಕ.ವಿ.ವಿ.ಯು ಸಂಯುಕ್ತವಾಗಿ ದಿನಾಂಕ 19 ಮತ್ತು 20 ಅಥವಾ 21 ಮತ್ತು 22ರ ಸೆಪ್ಟೆಂಬರ್‌ದಂದು ಏರ್ಪಾಡು ಮಾಡಲು ನಿರ್ಧರಿಸಲಾಗಿದೆ. ತರಬೇತುಗೊಂಡ ಬೋಧಕರು ತಮ್ಮ ಕಾಲೇಜಿನ ಎಲ್ಲ ವಿದ್ಯಾರ್ಥಿಗಳಿಗೆ ಭೌತಿಕವಾಗಿ "Financial Education and Investment Awareness" ವಿಷಯವನ್ನು ವಾರಕ್ಕೆ 02 ಗಂಟೆ ಬೋಧಿಸಬೇಕಾಗುವುದು.

ಆದ್ದರಿಂದ, ತಮ್ಮ ಮಹಾವಿದ್ಯಾಲಯದಿಂದ ಈ ಮೇಲಿನ 1 ಅಥವಾ 2 ಬೋಧಕ ಸಿಬ್ಬಂದಿಯವರನ್ನು ಸಂಯೋಜಕರೆಂದು ಈ ಕೂಡಲೇ ನೇಮಕ ಮಾಡಬೇಕೆಂದು ತಿಳಿಸಲಾಗಿದೆ. ನೇಮಕ ಮಾಡಲು ಗೂಗಲ್ ಫಾರ್ಮ https://forms.gle/SyqBAMMqHA95MiHq5 ಅನ್ನು ಬಳಸಬಹುದಾಗಿದೆ. ಸಂಯೋಜಕರನ್ನು ನೇಮಕ ಮಾಡದಿದ್ದರೆ ತಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಸದರಿ ವಿಷಯವನ್ನು ಕಲಿಯಲಾಗುವುದಿಲ್ಲ. ಕಾರಣ, ಈ ವಿಷಯವನ್ನು ಆದ್ಯತೆ ಮೇರೆಗೆ ಪರಿಗಣಿಸಿ ಸಂಯೋಜಕರನ್ನು ನೇಮಕ ಮಾಡುವದು. ಹೆಚ್ಚಿನ ವಿವರಕ್ಕಾಗಿ ವಿಶ್ವವಿದ್ಯಾಲಯದ ಸಂಯೋಜಕರಾದ ಡಾ. ಕಿರಣಕುಮಾರ ಬನ್ನಿಗೋಳ (9741525649) ಅಥವಾ NEP ನೊಡಲ್ ಅಧಿಕಾರಿಯಾದ ಡಾ.ಎಸ್.ಎಮ್.ತುವಾರ (9449796557) ಇವರನ್ನು ಸಂಪರ್ಕಿಸಬಹುದು.

**ಕಾರ್ಯಾಗಾರದ ವಿವರ**

| ಅ. ಸಂ. | ದಿನಾಂಕ | ಕಾರ್ಯಾಗಾರದ ವ್ಯಾಪ್ತಿ (ಮಹಾವಿದ್ಯಾಲಯಗಳ ಸಂಯೋಜಕರಿಗೆ ತರಬೇತಿ) | ಕಾರ್ಯಾಗಾರದ ಆಯೋಜಕರು ಮತ್ತು ಸ್ಥಳ |
|---|---|---|---|
| 1 | 19 ಮತ್ತು 20 ಸೆಪ್ಟೆಂಬರ್, 2022 | ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಯ ತಾಲ್ಲೂಕುಗಳಾದ – ಭಟ್ಕಳ, ಹೊನ್ನಾವರ, ಕುಮಟಾ, ಮುಂಡಗೋಡ, ಸಿದ್ಧಾಪುರ, ಶಿರಸಿ ಮತ್ತು ಕನ್ನಡ ಜನಪದ ವಿಶ್ವವಿದ್ಯಾಲಯ, ಗೊಟಗೂಡಿ. | ಕೆ.ಎಲ್.ಇ.ಯ. ಗುದ್ಲೆಪ್ಪ ಹಳ್ಳಿಕೇರಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಾವೇರಿ. |
| 2 | 21 ಮತ್ತು 22 ಸೆಪ್ಟೆಂಬರ್, 2022 | ಧಾರವಾಡ, ಉತ್ತರ ಕನ್ನಡ ಜಿಲ್ಲೆಯ ತಾಲ್ಲೂಕುಗಳಾದ ಕಾರವಾರ, ಅಂಕೋಲಾ, ಯಲ್ಲಾಪುರ, ದಾಂಡೇಲಿ, ಹಳಿಯಾಳ ಮತ್ತು ಜೊಯಿಡಾ | ಕೆ.ಎಲ್.ಇ.ಯ. ಪಿ.ಸಿ.ಜಾಬಿನ ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ. |

**ವಿಶೇಷ ಸೂಚನೆ:** ಸದರಿ ತರಬೇತಿ ಕಾರ್ಯಾಗಾರಕ್ಕೆ ಹಾಜರಾಗುವ ಸಂಯೋಜಕರಿಗೆ ಯಾವುದೇ ದಿನ ಭತ್ಯೆ ಹಾಗೂ ಪ್ರವಾಸ ಭತ್ಯೆ ನೀಡಲಾಗುವುದಿಲ್ಲ. ಆದಾಗ್ಯೂ, ದೂರದ ಮಹಾವಿದ್ಯಾಲಯಗಳ ಸಂಯೋಜಕರಿಗೆ ಸಂಬಂಧಪಟ್ಟ ಆಯೋಜಕರು ವಸತಿ ಸೌಲಭ್ಯವನ್ನು ಒದಗಿಸಲಿದ್ದಾರೆ.

9/9/22
ಕುಲಸಚಿವರು

ಪು.ತಿ.ನೋ.

ಗೆ,

1. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.
2. ಕುಲಸಚಿವರು, ಕನ್ನಡ ಜನಪದ ವಿಶ್ವವಿದ್ಯಾಲಯ, ಗೊಟಗೊಡಿ. ಶಿಗ್ಗಾಂವಿ, ಜಿ: ಹಾವೇರಿ.
3. ಪ್ರೊ. ಜಯಪ್ಪಾ, ವಿಶೇಷಾಧಿಕಾರಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
4. ಪ್ರಾಚಾರ್ಯರು, ಕೆ.ಎಲ್.ಇ.ಯ. ಗುದ್ಲಪ್ಪ ಹಳ್ಳಿಕೇರಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಾವೇರಿ.
5. ಪ್ರಾಚಾರ್ಯರು, ಕೆ.ಎಲ್.ಇ.ಯ. ಪಿ.ಸಿ.ಜಾಬಿನ ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ
6. ಕುಲಸಚಿವರು (ಮೌಲ್ಯಮಾಪನ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಪ್ರತಿ ಮಾಹಿತಿಗಾಗಿ:**

1. ಡಾ. ಕಿರಣಕುಮಾರ ಬನ್ನಿಗೋಳ, ವಿಶ್ವವಿದ್ಯಾಲಯದ ಸಂಯೋಜಕರು ಹಾಗೂ ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಕ.ವಿ.ವಿ. ಧಾರವಾಡ-580003.
2. ಡಾ. ಎಸ್.ಎಂ.ತುವಾರ, ಮುಖ್ಯ ನೋಡಲ್ ಅಧಿಕಾರಿ ಮತ್ತು ಸಹಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ.
3. ಡಾ. ಶಿವಶಂಕರ ಎಸ್., ಸಹ ನೋಡಲ್ ಅಧಿಕಾರಿ ಮತ್ತು ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಕಯಂತ್ರ ವಿಭಾಗ, UUCMS ಘಟಕ, ಕ.ವಿ.ವಿ. ಧಾರವಾಡ.
4. ಡಾ. ಎಂ.ಎನ್.ಮೆಗೇರಿ, ಸಹ ನೋಡಲ್ ಅಧಿಕಾರಿ ಮತ್ತು ಪ್ರಾಧ್ಯಾಪಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ
5. ಕುಲಸಚಿವರು (ಮೌಲ್ಯಮಾಪನ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
6. ಹಣಕಾಸು ಅಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
7. ನಿರ್ದೇಶಕರು, ಸಿ.ಡಿ.ಸಿ. ವಿಭಾಗ, ಕ.ವಿ.ವಿ. ಧಾರವಾಡ.
8. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
9. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
10. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.